ಎಂ.ವಿ.ಸಿಃ 386/2020 ಪಿಡಬ್ಲೂ–1 ಶಂಕರ್

ದಿನಾಂಕಃ 07.09.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಪಿ.ಎ.ಎಸ್. ವಕೀಲರಿಂದಃ

ಅಪಘಾತಗಳಿಂದಾದ ಗಾಯಗಳಿಗೆ ನಾನು ಚಾಮರಾಜನಗರದ ಸರ್ಕಾರಿ ಆಸ್ಪತ್ರೆಯಲ್ಲಿ ಮೊದಲು ಚಿಕಿತ್ಸೆ ಪಡೆದುಕೊಂಡು ಆ ನಂತರ ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಚಾಮರಾಜನಗರದಲ್ಲಿ ಡಾಃ ಮಾರುತಿ ರವರು ಚಿಕಿತ್ಸೆ ನೀಡಿರುತ್ತಾರೆ. ಕೆ.ಆರ್.ಆಸ್ಪತ್ರೆಯಲ್ಲಿ ಯಾರು ಚಿಕಿತ್ಸೆ ನೀಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಕೆ.ಆರ್.ಆಸ್ಪತ್ರೆಯಲ್ಲಿ ಪೂರ್ತಿ ಗುಣವಾದ ನಂತರ ಬಿಡುಗಡೆ ಮಾಡಿದ್ದಾರೆ ಎಂದರೆ ಸರಿ. ಅಪಘಾತದ ಸಮಯದಲ್ಲಿ ಮೋಟಾರು ಸೈಕಲನ್ನು ಸುರೇಶ್ ಎನ್ನುವವರು ಚಾಲನೆ ಮಾಡುತ್ತಿದ್ದರು. ಮೋಟಾರು ಸೈಕಲ್ ಚಾಲಕನಿಗೆ ಚಾಲನಾ ಪರವಾನಗಿ ಮತ್ತು ವಿಮೆ ಇಲ್ಲದೇ ಇರುವುದರಿಂದ ಲಾರಿ ಮೇಲೆ ಸುಳ್ಳು ಕೇಸನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಮೋಟಾರು ಸೈಕಲ್ ಚಾಲಕನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಮೋಟಾರು ಸೈಕಲ್ ಚಾಲಕ ಪರಿಹಾರದ ಹಣ ಕೊಡಬೇಕಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಲಾರಿಯ ಚಾಲಕ ರಸ್ತೆಯ ನಿಯಮಗಳನ್ನು ಪಾಲಿಸಿಕೊಂಡು ಲಾರಿಯನ್ನು ಚಾಲನೆ ಮಾಡುತ್ತಿದ್ದ ಎಂದರೆ ಸರಿಯಲ್ಲ. ನಾನು ಹಾಗೂ ಸುರೇಶ್ ಮೋಟಾರು ಸೈಕಲ್‌ನಲ್ಲಿ ಹೋಗುವಾಗ ಬಿದ್ದು ಗಾಯ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

2. ಪ್ಲಂಬಿಂಗ್ ಕೆಲಸವನ್ನು ನಗರದಲ್ಲಿ ಮಾಡುತ್ತೇನೆ, ವ್ಯವಸಾಯವನ್ನು ಊರಿನಲ್ಲಿ ಮಾಡುತ್ತೇನೆ. ನಾನು ಹೊಂಗಲವಾಡಿ ಗ್ರಾಮದವನು. ನಾನು ಪರಿಹಾರದ ಹಣ ಪಡೆಯುವ ಉದ್ದೇಶದಿಂದ ಲಾರಿ ಚಾಲಕನ ಮೇಲೆ ಸುಳ್ಳು ಕೇಸನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರರು ವಿಮಾ ಷರತ್ತನ್ನು ಉಲ್ಲಂಘಿಸಿರುವುದರಿಂದ 2 ನೇಎದುರುದಾರರು ಪರಿಹಾರದ ಹಣ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನಿಪಿ.19 ಬಿಲ್ಲುಗಳನ್ನು ಕೇಸಿಗೋಸ್ಕರ ಸೃಷ್ಟಿ ಮಾಡಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಗೂ ಸುರೇಶ್ ಮೋಟಾರು ಸೈಕಲ್ ನಲ್ಲಿ ಹೋಗುವಾಗ ಬಿದ್ದು ಅಪಘಾತ ಪಡಿಸಿಕೊಂಡಿರುವುದರಿಂದ ಅದೇ ದಿನ ದೂರನ್ನು ನೀಡಿಲ್ಲ ಎಂದರೆ ಸರಿಯಲ್ಲ. ಲಾರಿಯನ್ನು ಈ ಅಪಘಾತದ ಕೇಸಿನಲ್ಲಿ ಸಿಲುಕಿಸಿ ವಿಳಂಬವಾಗಿ ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ವೈದ್ಯಕೀಯ ದಾಖಲೆಗಳಲ್ಲಿ ಲಾರಿಯಿಂದ ಅಪಘಾತವಾಗಿದೆ ಎಂದು ನಮೂದು ಇಲ್ಲ ಎಂದರೆ ಸರಿಯಲ್ಲ.

(ಮರು ವಿಚಾರಣೆ ಇಲ್ಲ.)
(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಾಮರಾಜನಗರ.